## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2017-18ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ **(Coverage Head) for Suatainability (functionality)** ಹಾಗೂ Coverage / Normal Component (Reimbursement Mode) ಘಟಕದ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನವನ್ನು ಜಿಲ್ಲಾವಾರು / ವಿಭಾಗವಾರು ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/60/ಗ್ರಾಕುನೀ&ನೈಇ/2017, ಬೆಂಗಳೂರು, ದಿನಾಂಕ 23-01-2018.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/60/ಗ್ರಾಕುನೀ&ನೈಇ/2017, ಬೆಂಗಳೂರು, ದಿನಾಂಕ 19-02-2018.
3) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: W-11012/01/2018-Water-I, ದಿನಾಂಕ 03-02-2018.

**ಪೀಠಿಕೆ:**

ಮೇಲೆ ಓದಲಾದ ಉಲ್ಲೇಖ (1) ರ ಸರ್ಕಾರದ ಆದೇಶದಡಿ 2017-18ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ **(Coverage Head) for Suatainability (functionality) ಘಟಕದಡಿ** ಕೇಂದ್ರದ ಪಾಲಿನ ಅನುದಾನ ರೂ.8016.14 ಲಕ್ಷಗಳು ಹಾಗೂ ರಾಜ್ಯದ ಪಾಲಿನ ಅನುದಾನ ರೂ.8016.14 ಲಕ್ಷಗಳು **ಒಟ್ಟು ರೂ.16032.28 ಲಕ್ಷಗಳು (ರೂಪಾಯಿ ಒಂದುನೂರ ಅರವತ್ತು ಕೋಟಿ ಮುವತ್ತೆರಡು ಲಕ್ಷ ಹಾಗೂ ಇಪ್ಪತ್ತೆಂಟು ಸಾವಿರಗಳು ಮಾತ್ರ)** ಗಳಲ್ಲಿ ಲೆಕ್ಕ ಶೀರ್ಷಿಕೆ 2215-01-102-9-08 – 132 ಸಾಮಾನ್ಯ ಅಡಿ ರೂ.11357.50 ಲಕ್ಷಗಳು, ಲೆಕ್ಕ ಶೀರ್ಷಿಕೆ 2215-01-102-9-08 – 422 ಎಸ್.ಸಿ.ಪಿ. ಅಡಿ ರೂ.3207.26 ಲಕ್ಷಗಳು ಹಾಗೂ ಲೆಕ್ಕ ಶೀರ್ಷಿಕೆ 2215-01-102-9-08 – 423 ಟಿ.ಎಸ್.ಪಿ. ಅಡಿ ರೂ.1467.52 ಲಕ್ಷಗಳನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಬಿಡುಗಡೆ ಮಾಡಲಾಗಿರುತ್ತದೆ.

ಹಾಗೂ ಉಲ್ಲೇಖ (2) ರ ಆದೇಶದಲ್ಲಿ **Coverage / Normal Component (Reimbursement Mode) ಘಟಕದಡಿ** ಕೇಂದ್ರದ ಪಾಲಿನ ಅನುದಾನ ರೂ.7594.25 ಲಕ್ಷಗಳ ಬಿಡುಗಡೆ ಆದೇಶ ಕೇಂದ್ರದಿಂದ ಸ್ವೀಕೃತವಾಗಿರುತ್ತದೆ.

ಮೇಲೆ ಓದಲಾದ ಉಲ್ಲೇಖ (3) ರ ಸರ್ಕಾರದ ಪತ್ರದಲ್ಲಿ ಕೇಂದ್ರದಿಂದ **(Reimbursement Mode) ಘಟಕದಡಿ** ಬಿಡುಗಡೆಯಾದ ಅನುದಾನವನ್ನು ನಿಗದಿತ ದಿನಾಂಕದೊಳಗೆ ವೆಚ್ಚಮಾಡಲು ಅಥವಾ ರಾಜ್ಯ ವಲಯದ ಅನುದಾನದಲ್ಲಿ ಭರಿಸಿರುವ ವೆಚ್ಚವನ್ನು ಕೇಂದ್ರದ ಅನುದಾನಕ್ಕೆ ಎದುರಾಗಿ ವೆಚ್ಚ ವರ್ಗಾಹಿಸಲು ತಿಳಿಸಿರುತ್ತಾರೆ.

ಮುಂದುವರೆದು, ಪ್ರಸ್ತುತ ಸದರಿ **(Coverage Head) for Suatainability (functionality)** ಘಟಕದಡಿ ಬಿಡುಗಡೆ ಮಾಡಲಾಗಿರುವ **ಒಟ್ಟು ರೂ.16032.28 ಲಕ್ಷಗಳಲ್ಲಿ ರೂ.8000.10 ಲಕ್ಷಗಳು ಕೇಂದ್ರಪಾಲಿನ ಅನುದಾನ**ವನ್ನು ರಾಜ್ಯದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಳಿಗೆ **C & Q MVS (SCP,TSP & Gen)** ಘಟಕದಡಿ ಕಾಮಗಾರಿವಾರು ಅನುಬಂದ-02ರಲ್ಲಿರುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ಬಿಡುಗಡೆ ಮಾಡಲು ಮತ್ತು ಸದರಿ ಕಾಮಗಾರಿಗಳಿಗೆ ಈಗಾಗಲೇ ಬಿಡುಗಡೆಮಾಡಿರುವ ರಾಜ್ಯ ವಲಯದ ಸದರಿ ಅನುದಾನವನ್ನು ಅನುಬಂದ-01ರಲ್ಲಿರುವಂತೆ ಹಿಂಪಡೆಯಲು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ, ಈ ಕೆಳಕಂಡ ಆದೇಶ.

### ಸರ್ಕಾರದ ಆದೇಶ ಸಂ.ಗ್ರಾಅಪ/46/ಗ್ರಾಕುನೀ&ನೈಇ/2017, ಬೆಂಗಳೂರು, ದಿನಾಂಕ 05-03-2018

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ 2017-18ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ **C & Q MVS (SCP,TSP & Gen)** ಘಟಕದಡಿಯ ಒಟ್ಟು **ರೂ.8000.10** ಲಕ್ಷಗಳಲ್ಲಿ ಲೆಕ್ಕ ಶೀರ್ಷಿಕೆ 2215-01-102-9-08 – 132 ಸಾಮಾನ್ಯ ಅಡಿ ರೂ.6049.58 ಲಕ್ಷಗಳು, ಲೆಕ್ಕ ಶೀರ್ಷಿಕೆ 2215-01-102-9-08 – 422 ಎಸ್.ಸಿ.ಪಿ. ಅಡಿ ರೂ.1450.39ಲಕ್ಷಗಳು ಹಾಗೂ ಲೆಕ್ಕ ಶೀರ್ಷಿಕೆ 2215-01-102-9-08 – 423 ಟಿ.ಎಸ್.ಪಿ. ಅಡಿ ರೂ.500.13 ಲಕ್ಷಗಳ ಅನುದಾನವನ್ನು **ಅನುಬಂಧ-2** ರಲ್ಲಿ ತೋರಿಸಿರುವಂತೆ ರಾಜ್ಯದ ಹಾವೇರಿ, ಗದಗ ಮತ್ತು ಮೈಸೂರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳಿಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಸಾಮಾನ್ಯದಡಿ ಬಿಡುಗಡೆಯಾದ ಅನುದಾನವನ್ನು ಲೆಕ್ಕಶೀರ್ಷಿಕೆ 2215-01-102-9-08-132 (ಯೋಜನೆ), SCP ಅಡಿ ಬಿಡುಗಡೆಯಾದ ಅನುದಾನವನ್ನು 2215-01-102-9-08-422 ಹಾಗೂ TSP ಅಡಿ ಬಿಡುಗಡೆಯಾದ ಅನುದಾನವನ್ನು 2215-01-102-9-08-423 ಅಡಿ ವೆಚ್ಚ ಭರಿಸತಕ್ಕದ್ದು.

3. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು RTGS ಮುಖೇನ ಈಗಾಗಲೇ ಗೊತ್ತುಪಡಿಸಿರುವ SWSM ಬ್ಯಾಂಕ್ ಮೂಲ ಉಳಿತಾಯ ಖಾತೆ ಸಂಖ್ಯೆ: 04462010091577 ಮುಖಾಂತರ ವಿನಿಯೋಗಿಸತಕ್ಕದ್ದು.

4. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಕರ್ನಾಟಕ ಪಾರದರ್ಶಕ ಕಾಯ್ದೆ-1999 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು-2000, ಕರ್ನಾಟಕ ಆರ್ಥಿಕ ಸಂಹಿತೆ-1958 ಹಾಗೂ ಚಾಲ್ತಿ ಇರುವ ಇಲಾಖಾ ಇತರೆ ನಿಯಮಗಳು / ಕಾಯ್ದೆಗಳನ್ವಯ ಖರ್ಚು ಭರಿಸತಕ್ಕದ್ದು.

5. ರಾಜ್ಯ ಮಟ್ಟದಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ SWSM ನ ಮೂಲ ಉಳಿತಾಯ ಖಾತೆ ಸಂಖ್ಯೆ: 04462010091577 ಯಿಂದ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳ ಮೇಲುರುಜುವಿನೊಂದಿಗೆ ಆಯಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ ಸಾಮಾನ್ಯ, ಎಸ್.ಸಿ.ಪಿ., ಟಿ.ಎಸ್.ಪಿ. ಹಾಗೂ ಸಾಮಾನ್ಯ ಅಡಿ ಕಳುಹಿಸುವ ಬಿಲ್ಲುಗಳನ್ನು ಈ ಆದೇಶದಲ್ಲಿ ಸಂಬಂಧಿಸಿದ ಜಿಲ್ಲಾವಾರು ಬಿಡುಗಡೆ ಮಾಡಿರುವ ಅನುದಾನದ ಮಿತಿಯೊಳಗೆ ಮಾನ್ಯ ಮಾಡಲು ಸಿಂಡಿಕೇಟ್ ಬ್ಯಾಂಕ್ – ರಾಜ್ಯ ಮಟ್ಟದಲ್ಲಿ ಕ್ರಮವಹಿಸತಕ್ಕದ್ದು. ಹಾಗೂ ಇಲಾಖಾ ಪಂಚತಂತ್ರದ ತಂತ್ರಾಂಶದಲ್ಲಿ (ಗಾಂಧಿ ಸಾಕ್ಷಿ ಕಾಯಕಲ್ಪ) ಹಾಗೂ IMIS ನಲ್ಲಿ ವೆಚ್ಚ ದಾಖಲಿಸಬೇಕು. ಇದನ್ನು ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಪರಿವೀಕ್ಷಿಸಿ ದೃಢೀಕರಿಸಬೇಕು.

6. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣದಲ್ಲೂ ಇತರೆ ಘಟಕದಡಿ ವರ್ಗಾಯಿಸಿ ಉಪಯೋಗಿಸಿಕೊಳ್ಳದಂತೆ ಕ್ರಮ ವಹಿಸತಕ್ಕದ್ದು.

7. ಬ್ಯಾಂಕ್‌ಗೆ ಕಳುಹಿಸುವ ಆರ್.ಟಿ.ಜಿ.ಎಸ್. ನಮೂನೆಯಲ್ಲಿ **ಸಂಬಂಧಿಸಿದ ಘಟಕಗಳ ಹೆಸರನ್ನು** ನಮೂದಿಸತಕ್ಕದ್ದು ಹಾಗೂ ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಈಗಾಗಲೇ ಅನುಮೋದನೆಯಾಗಿ ಕ್ರಿಯಾ ಯೋಜನೆಯಡಿ ಸೇರ್ಪಡಿಸಲ್ಪಟ್ಟಿರುವ ಮುಂದುವರಿದಿರುವ / ಪೂರ್ಣಗೊಂಡಿರುವ / ಪೂರ್ಣಗೊಳಿಸ ಬೇಕಾಗಿರುವ ಕುಡಿಯುವ ನೀರಿನ ಯೋಜನೆಗಳಿಗೆ ಮಾತ್ರ ವಿನಿಯೋಗಿಸತಕ್ಕದ್ದು.

8. ಆಯಾಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆದುರಾಗಿ ಸಂಬಂಧಪಟ್ಟ ಕಾಮಗಾರಿಗಳ ಅನುಷ್ಠಾನದ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು IMIS ನಲ್ಲಿ ಪ್ರತಿ ಮಾಹೆ 10ನೇ ದಿನಾಂಕದೊಳಗೆ ಇಂದೀಕರಿಸತಕ್ಕದ್ದು. ಹಾಗೂ ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ ಇವರು ಆಯಾಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು IMIS ನಲ್ಲಿ ಇಂದೀಕರೀಸಿದ ಮಾಹಿತಿಯನ್ನು ಪರಿಶೀಲಿಸತಕ್ಕದ್ದು.

9. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾ.ಕು.ನೀ.&.ನೈ. ಇಲಾಖೆ ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನವನ್ನು IMIS ನಲ್ಲಿ ಇಂದೀಕರಿಸತಕ್ಕದ್ದು.

10. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣದಲ್ಲೂ ಇತರೆ ಘಟಕದಡಿ ವರ್ಗಾಯಿಸಿ ಉಪಯೋಗಿಸಿಕೊಳ್ಳದಂತೆ ಕ್ರಮ ವಹಿಸತಕ್ಕದ್ದು. ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ಮಾಡಿ ವರದಿ ಮಾಡತಕ್ಕದ್ದು.

11. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಮಾರ್ಚ 31ರೊಳಗೆ ವೆಚ್ಚಮಾಡತಕ್ಕದ್ದು ಮತ್ತು IMIS ನಲ್ಲಿ ಇಂದೀಕರಿಸತಕ್ಕದ್ದು.

12. ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಸಂ.ಎಫ್‌ಡಿ/355/ವೆಚ್ಚ-6/2016, ದಿನಾಂಕ 4-5-2017 ಹಾಗೂ ಸರ್ಕಾರದ ಆದೇಶ ಸಂ.ಗ್ರಾಅಪ/60/ಗ್ರಾಕುನೀ&ನೈಇ/2017, ಬೆಂಗಳೂರು, ದಿನಾಂಕ 23-01-2018 ಮತ್ತು ದಿನಾಂಕ 19-02-2018 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಆಯುಕ್ತರು ಹಾಗೂ
ಸರ್ಕಾರದ ಪದನಿಮಿತ್ತ ಕಾರ್ಯದರ್ಶಿ,
ಗ್ರಾ. ಕು. ನೀ. &. ನೈ. ಇಲಾಖೆ, ಬೆಂಗಳೂರು.

**ಪ್ರತಿಯನ್ನು :**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, 1ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ, ಕಾವೇರಿಭವನ, ಬೆಂಗಳೂರು.
6. ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಹಾವೇರಿ, ಗದಗ ಮತ್ತು ಮೈಸೂರು ಜಿಲ್ಲೆಗಳು
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ, ಗದಗ ಮತ್ತು ಮೈಸೂರು ಜಿಲ್ಲೆಗಳು ಇವರಿಗೆ ಕಳುಹಿಸುತ್ತಾ, ಆದೇಶದಲ್ಲಿನ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸೂಚಿಸಿದೆ.
8. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ, 4 ವೃತ್ತ ಕಛೇರಿಗಳು
9. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
13. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
14. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
15. ಮುಖ್ಯ ಲೆಕ್ಕಾಧಿಕಾರಿಗಳು, RDW&SD ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
16. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾವೇರಿ, ಗದಗ ಮತ್ತು ಮೈಸೂರು ಜಿಲ್ಲೆಗಳು ಇವರಿಗೆ ಕಳುಹಿಸುತ್ತಾ, ಆದೇಶದಲ್ಲಿನ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸೂಚಿಸಿದೆ.
17. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, ಹಾವೇರಿ, ಗದಗ ಮತ್ತು ಮೈಸೂರು ವಿಭಾಗ ಕಛೇರಿಗಳು ಇವರಿಗೆ ಕಳುಹಿಸುತ್ತಾ, ಆದೇಶದಲ್ಲಿನ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸೂಚಿಸಿದೆ.
18. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್), ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
19. ಆಯುಕ್ತರು, RDW&SD ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ ಇವರ ಆಪ್ತ ಸಹಾಯಕರಿಗೆ.
20. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಶಾಖೆ, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
21. ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರ ಆಪ್ತ ಸಹಾಯಕರು.
22. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ.&.ಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
24. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
25. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
26. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ-01

ಸರ್ಕಾರದ ಆದೇಶ ಸಂ.ಗ್ರಾಅಪ/46/ಗ್ರಾಕುನೀ&ನೈಇ/2017, ಬೆಂಗಳೂರು, ದಿನಾಂಕ 05-03-2018 ರ ಲಗತ್ತು

**2017-18ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ C&Q (MVS-SCP, TSP) ಘಟಕದಡಿ ಬಹುಗ್ರಾಮ ಕುಡಿಯುವ ನೀರು ಯೋಜನೆಗಳಿಗೆ ಬಿಡುಗಡೆ ರಾಜ್ಯ ವಲಯದ ಅನುದಾನದಲ್ಲಿ ಹಿಂಪಡೆಯಲಾದ ಅನುದಾನ.**

*(ರೂ. ಲಕ್ಷಗಳಲ್ಲಿ)*

| ಕ್ರ. ಸಂ. | ಜಿಲ್ಲೆ / ವಿಭಾಗ | ಕಾಮಗಾರಿಗಳು | ಹಿಂಪಡೆಯಲಾದ ರಾಜ್ಯ ವಲಯದ ಅನುದಾನ. | | | |
|---|---|---|---|---|---|---|
| | | | 31 | TSP | GEN | Total |
| 1 | ಹಾವೇರಿ | ಕಾಗಿನೆಲೆ & ಇತರೆ 26 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. | 9.75 | 8.78 | 87.09 | **105.62** |
| | | ಒಟ್ಟು | 9.75 | 8.78 | 87.09 | **105.62** |
| 2 | ಗದಗ | DBOT-Package-02 | 600.00 | 0.00 | 2597.40 | **3197.40** |
| | | ಒಟ್ಟು | **600.00** | **0.00** | **2597.40** | **3197.40** |
| 3 | ಮೈಸೂರು | ಹುಲ್ಲಳ್ಳಿ & ಇತರೆ 123 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ನಂಜನಗೂಡು ತಾ | 732.83 | 444.76 | 2659.86 | **3837.45** |
| | | ಮಣ್ಣೆಹುಂಡಿ & ಇತರೆ 05 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ಟಿ.ನರಸೀಪುರ ತಾ | 19.29 | 10.30 | 99.04 | **128.63** |
| | | ತುಂಬಲ & ಇತರೆ 21 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ಟಿ.ನರಸೀಪುರ ತಾ | 88.52 | 36.29 | 606.19 | **731.00** |
| | | ಒಟ್ಟು | 840.64 | 491.35 | 3365.09 | **4697.08** |
| ಒಟ್ಟಾರೆ | | | **1450.39** | **500.13** | **6049.58** | **8000.10** |

ಆಯುಕ್ತರು ಹಾಗೂ
ಸರ್ಕಾರದ ಪದನಿಮಿತ್ತ ಕಾರ್ಯದರ್ಶಿ,
ಗ್ರಾ. ಕು. ನೀ. &. ನೈ. ಇಲಾಖೆ, ಬೆಂಗಳೂರು.

ಅನುಬಂಧ-02

ಸರ್ಕಾರದ ಆದೇಶ ಸಂ.ಗ್ರಾಅಪ/46/ಗ್ರಾಕುನೀ&ನೈಇ/2017, ಬೆಂಗಳೂರು, ದಿನಾಂಕ 05-03-2018 ರ ಲಗತ್ತು

## 2017-18ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ C&Q (MVS-SCP, TSP) ಘಟಕದಡಿ ಬಹುಗ್ರಾಮ ಕುಡಿಯುವ ನೀರು ಯೋಜನೆಗಳಿಗೆ ಬಿಡುಗಡೆ ಮಾಡಲಾದ ಕೇಂದ್ರದ ಪಾಲಿನ ಅನುದಾನದ.

*(ರೂ. ಲಕ್ಷಗಳಲ್ಲಿ)*

| ಕ್ರ. ಸಂ. | ಜಿಲ್ಲೆ / ವಿಭಾಗ | ಕಾಮಗಾರಿಗಳು | ಬಿಡುಗಡೆ ಮಾಡಲಾದ ಕೇಂದ್ರದ ಪಾಲಿನ ಅನುದಾನ. | | | |
|---|---|---|---|---|---|---|
| | | | SCP | TSP | GEN | Total |
| 1 | ಹಾವೇರಿ | ಕಾಗಿನೆಲೆ & ಇತರೆ 26 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. | 9.75 | 8.78 | 87.09 | **105.62** |
| | | ಒಟ್ಟು | 9.75 | 8.78 | 87.09 | **105.62** |
| 2 | ಗದಗ | DBOT-Package-02 | 600.00 | 0.00 | 2597.40 | **3197.40** |
| | | ಒಟ್ಟು | **600.00** | **0.00** | **2597.40** | **3197.40** |
| 3 | ಮೈಸೂರು | ಹುಲ್ಲಳ್ಳಿ & ಇತರೆ 123 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ನಂಜನಗೂಡು ತಾ | 732.83 | 444.76 | 2659.86 | **3837.45** |
| | | ಮಣ್ಣೆಹುಂಡಿ & ಇತರೆ 05 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ಟಿ.ನರಸೀಪುರ ತಾ | 19.29 | 10.30 | 99.04 | **128.63** |
| | | ತುಂಬಲ & ಇತರೆ 21 ಗ್ರಾಮಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆ. ಟಿ.ನರಸೀಪುರ ತಾ | 88.52 | 36.29 | 606.19 | **731.00** |
| | | ಒಟ್ಟು | 840.64 | 491.35 | 3365.09 | **4697.08** |
| ಒಟ್ಟಾರೆ | | | **1450.39** | **500.13** | **6049.58** | **8000.10** |

ಆಯುಕ್ತರು ಹಾಗೂ
ಸರ್ಕಾರದ ಪದನಿಮಿತ್ತ ಕಾರ್ಯದರ್ಶಿ,
ಗ್ರಾ. ಕು. ನೀ. &. ನೈ. ಇಲಾಖೆ, ಬೆಂಗಳೂರು.